ಬನ್ನೂರು ಕ್ಷೇತ್ರದಲ್ಲಿರುವ ಏತ ನೀರಾವರಿ ಯೋಜನೆಗಳು

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೪೩ (೨೪೨೯)

ಸದಸ್ಯರ ಹೆಸರು : ಶ್ರೀಮತಿ ಸುನೀತ ವೀರಪ್ಪಗೌಡ ಜೆ (ಬನ್ನೂರು)

ಉತ್ತರಿಸುವವರು : ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ) ಬನ್ನೂರು ಮತಕ್ಷೇತ್ರದಲ್ಲಿರುವ ಏತ ನೀರಾವರಿ ಯೋಜನೆಗಳೆಷ್ಟು ;

ಆ) ಎಲ್ಲಾ ಏತ ನೀರಾವರಿಗಳು ತಮ್ಮ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆಯೇ;

ಇ) ನಿರ್ವಹಿಸದಿದ್ದಲ್ಲಿ ಎಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿಲ್ಲ ವಿವರ ನೀಡುವುದು ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ;

ಉತ್ತರ

ಅ) ಬನ್ನೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಏತ ನೀರಾವರಿ ಯೋಜನೆಯು ಅಸ್ತಿತ್ವದಲ್ಲಿದೆ.

ಆ) ನಿರ್ವಹಿಸುತ್ತಿಲ್ಲ. ದುರಸ್ತಿಯಲ್ಲಿದೆ.

ಇ) ೨೦೦೪ ರಿಂದ ಕಾರ್ಯ ನಿರ್ವಹಿಸುತ್ತಿಲ್ಲ, ಈ ಯೋಜನೆ ೧೯೮೩ರಲ್ಲಿ ಅನುಷ್ಠಾನಗೊಂಡಿದ್ದು, ೧೯ ವರ್ಷಗಳ ಕಾಲ ನಿರಂತರವಾಗಿ ಯೋಜನೆ ಚಾಲನೆಯಲ್ಲಿದ್ದುದರಿಂದ, ಯಂತ್ರೋಪಕರಣಗಳ ವಿಪರೀತ ಸವೆತದಿಂದಾಗಿ ಅವುಗಳ ಸಾಮರ್ಥ್ಯವನ್ನು ಕಳೆದುಕೊಂಡು ೨೦೦೪ರಲ್ಲಿ ಸ್ಥಗಿತಗೊಂಡಿದೆ.

ಈ) ಯೋಜನೆಯ ದುರಸ್ತಿಗೆ ೬೩.೦೦ ಲಕ್ಷ ರೂ.ಗಳ ಅಂದಾಜನ್ನು ತಯಾರಿಸಲಾಗಿದೆ. ೨೦೦೭–೦೮ ನೇ ಸಾಲಿನಲ್ಲಿ ಅನುದಾನದ ಲಭ್ಯತೆಯ ಆಧಾರದ ಮೇಲೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀಮತಿ ಸುನೀತ ವೀರಪ್ಪಗೌಡ : ಅಧ್ಯಕ್ಷರೇ, ಇಲ್ಲಿ ಕೊಟ್ಟಿರುವ ಉತ್ತರ ಒಂದೂ ಸರಿಯಿಲ್ಲ, ಅಧಿಕಾರಿಗಳು ಕುಡಿದು ಉತ್ತರ ಕೊಟ್ಟಂತೆ ಇದು ಇದೆ. ಮೊದಲನೇ ಪ್ರಶ್ನೆಗೆ ಸರಿಯಾದ ಉತ್ತರ ಯಾವುದೂ ಅಸ್ತಿತ್ವದಲ್ಲಿ ಇರುವುದಿಲ್ಲ, ಮೂರನೇ ಪ್ರಶ್ನೆಗೆ ೨೦೦೪ರಿಂದ ಕಾರ್ಯ ನಿರ್ವಹಿಸುತ್ತಿಲ್ಲ ಎಂದಿರುವುದು ತಪ್ಪು, ಸುಮಾರು ೧೦–೧೫ ವರ್ಷಗಳಿಂದ ಮುಡುಕುತೊರೆ ಏತ ನೀರಾವರಿ ಯೋಜನೆ ನಿಂತುಹೋಗಿದೆ. ೨೦೦೫ರಲ್ಲಿ ಈ ಪ್ರಶ್ನೆ ಕೇಳಿದಾಗ ಸದರಿ ಏತನೀರಾವರಿ ಯೋಜನೆಗೆ ವಿದ್ಯುತ್ ಕೊರತೆ ಇರುವುದರಿಂದ ಮತ್ತು ೧೨ ಲಕ್ಷ ವಿದ್ಯುತ್ ಬಿಲ್ ಬಾಕಿ ಇರುವುದರಿಂದ ನಿಂತುಹೋಗಿದೆ ಎಂದು ಉತ್ತರಿಸಿದ್ದರು. ಈ ಸಾರಿ ಇವರು ಕೊಟ್ಟಿರುವ ಉತ್ತರವೆಲ್ಲ ಪರಿಪೂರ್ಣ ತಪ್ಪು. ನನಗೆ ಸರಿ ಉತ್ತರ ಬೇಕು.

ಶ್ರೀ ರಾಮಚಂದ್ರಗೌಡ (ಉಪ ಮುಖ್ಯಮಂತ್ರಿಗಳ ಪರವಾಗಿ) : ಅಧ್ಯಕ್ಷರೇ, ಬನ್ನೂರು ಕ್ಷೇತ್ರದ ಏತ ನೀರಾವರಿ ಯೋಜನೆ ೧೯೮೩ರಲ್ಲಿ ಪ್ರಾರಂಭವಾಗಿದ್ದು ೨೦೦೪ರವರೆಗೆ ೨೧ ವರ್ಷ ಕಾಲ ನಡೆದಿದೆ.

ಶ್ರೀಮತಿ ಸುನೀತ ವೀರಪ್ಪಗೌಡ : ೨೦೦೪ ಅಲ್ಲ, ೧೨–೧೩ ವರ್ಷವಾಗಿದೆ ಅದು ನಿಂತುಹೋಗಿದೆ. ಸರಿಯಾದ ಉತ್ತರ ಮತ್ತು ತರಿಸಿಕೊಂಡು ಹೇಳಲಿ.

ಶ್ರೀ ರಾಮಚಂದ್ರಗೌಡ : ಈ ಯೋಜನೆಗೆ ೬೩ ಲಕ್ಷ ರೂ ಅಂದಾಜಾಗಿದ್ದು. ಇದರಲ್ಲಿ ಏನಾಗಿದೆ ಅಂದರೆ ಮೊದಲಿನ ಕಾವೇರಿ ಅಭಿವೃದ್ಧಿ ನಿಗಮದಡಿ ಇದು ಆಗಬೇಕಾಗಿತ್ತು. ಸದರಿ ನಿಗಮ ಮುಚ್ಚಿದ ಮೇಲೆ ಇದೆಲ್ಲ ಸಣ್ಣ ನೀರಾವರಿ ಇಲಾಖೆಗೆ ಬಂದಿದೆ. ಆದರೆ ಅನುದಾನದ ಕೊರತೆಯಿಂದ ೨೦೦೪ರಿಂದ ಇಲ್ಲಿಯವರೆಗೆ ರಿಪೇರಿ ಮಾಡಲಿಲ್ಲ. ಅಧಿಕಾರಿಗಳು ಏನು ಮಾಡುತ್ತಿದ್ದರೆಂಬುದನ್ನು ನಾನು ಒಳಗಡೆ ನೋಡಬೇಕು. ೨೦೦೪ರಿಂದ ಅದು ನಿಂತುಹೋಗಿದೆ ಇದು ಅನ್ಯಾಯ ಎಂದು ನಾನು ಒಪ್ಪುತ್ತೇನೆ. ಇದನ್ನು ಸರಿಪಡಿಸುವ ಹೊಣೆ ಸರ್ಕಾರ ಹೊರುತ್ತದೆ, ಇದರ ಬಗ್ಗೆ ಉಪಮುಖ್ಯಮಂತ್ರಿಗಳ ಗಮನಕ್ಕೆ ತಂದು, ಅಧಿಕಾರಿಗಳ ಜತೆ ನಾನು ಈಗಾಗಲೇ ಮಾತನಾಡಿದ್ದೇನೆ. ಅನುದಾನ ಎಂದು ಹೇಳದೆ ಕೂಡಲೇ ಹಣವೊದಗಿಸಿ ಇದನ್ನು ಚಾಲುಗೊಳಿಸಲಾಗುವುದೆಂಬ ಮಾಹಿತಿ ನಾನು ತಂದಿದ್ದೇನೆ.

ಶ್ರೀಮತಿ ಸುನೀತ ವೀರಪ್ಪಗೌಡ : ಸಂಪೂರ್ಣ ಉತ್ತರವೇ ತಪ್ಪು ಕೊಟ್ಟಿದ್ದಾರೆ.

ಅಧ್ಯಕ್ಷರು : ಸಚಿವರು ಉಪ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಉತ್ತರ ಕೊಡಲಿ.

ಶ್ರೀ ರಾಮಚಂದ್ರಗೌಡ : ಅಧಿಕಾರಿಗಳನ್ನು ನಿಮ್ಮ ಎದುರಿಗೆ ಕೂರಿಸಿ ಮಾತನಾಡಿಸಿ ಏನು ಪರಿಹಾರ ಸಿಗಬೇಕೋ ಅದನ್ನು ನಾನು ಮಾಡಿಸಿಕೊಡುತ್ತೇನೆ.

ಜಮೀನನ್ನು ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕಾಗಿ ಬಳಸುವುದು

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೪೪ (೧೯೮೩)

ಸದಸ್ಯರ ಹೆಸರು : ಡಾ॥ ಸುಧಾಕರ್ ಎಂ.ಸಿ (ಚಿಂತಾಮಣಿ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಚಿಂತಾಮಣಿ ತಾಲ್ಲೂಕು ಕಸಬಾ ಹೋಬಳಿ, ಸೊಣಶೆಟ್ಟಹಳ್ಳಿ ಗ್ರಾಮದ ಸರ್ವೆ ನಂಬರ್ ೪೯ರಲ್ಲಿ ಸಾರ್ವಜನಿಕರ ಉದ್ದೇಶಕ್ಕಾಗಿ ಇಟ್ಟಿರುವ ಕೆರೆ ಅಂಗಳವನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಒತ್ತುವರಿದಾರರನ್ನು ಯಾವಾಗ ತೆರವುಗೊಳಿಸಲಾಗುವುದು ;

ಇ) ತೆರವುಗೊಳಿಸಲಾದ ಕೆರೆಯ ಜಮೀನನ್ನು ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕಾಗಿ ಉಪಯೋಗಿಸಲಾಗುವುದೇ ;

ಉತ್ತರ

ಅ) ಹೌದು